ಅಧ್ಯಕ್ಷರು.–ಈ ಚರ್ಚೆಯ ಮೇಲೆ ಬಹಳ ಜನರು ಮಾತನಾಡುವವರು ಇರುವುದರಿಂದ ಬಿಡುವು ಚೀಡವೆಂದುಕೊಂಡಿದ್ದೆ. ಆಯಿತು, ಬಿಡುವು ಕೊಡೋಣ. ಶ್ರೀ ವಾಟಾಳ್ ನಾಗರಾಜ್ ಅವರೇ ತಾವು ಬಿಡುವಿನ ನಂತರ ಮಾತನಾಡಿ. ಈಗ ಸದನವು ಮೇಲೆದ್ದು ಮತ್ತೆ ೨ ಗಂಟೆ ೧೦ ನಿಮಿಷಕ್ಕೆ ಸಮಾವೇಶಗೊಳ್ಳುವುದು.

(ಸದನವು ೧ ಗಂಟೆ ೯ ನಿಮಿಷಕ್ಕೆ ಮುಂಕ್ತಾಯವಾಗಿ ೨ ಗಂಟೆ ೧೦ ನಿಮಿಷಕ್ಕೆ ಸೇರಲು ನಿಶ್ಚಯಿಸಿತು.

ಸದನವು ಮಧ್ಯಾಹ್ನ ೨–೨೬ಕ್ಕೆ ಪುನಃ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು.

ಮಂತ್ರಿಯಂವರಿಂದ ಹೇಳಿಕೆ

ಮೈಸೂರಿನಲ್ಲಿ ಕುಮಾರಿ ಎಸ್, ಜಿ, ಮಹೇಶ್ವರಿ ಎಂಬ ಹುಡುಗಿಯ ಮೇಲೆ ಅತ್ಯಾಚಾರವೆಸಗಿರುವ ಬಗ್ಗೆ

ಶ್ರೀ ಧರ್ಮಸಿಂಗ್, (ಗೃಹ ಸಚಿವರು)—ಪೂಜ್ಯ ಅಧ್ಯಕ್ಷರೆ, ಕುಮಾರಿ ಎಸ್. ಜಿ. ಮಹೇಶ್ವರಿ ಬಿನ್. ಶ್ರೀ ಕೆ. ಎಸ್. ಜಯದೇವಯ್ಯ. ಇವಳು ದೂರನ್ನು ನೀಡಿದ್ದು ತನ್ನನ್ನು ವಿದೇಶಿ ಮಹಿಳೆ ಶ್ರೀಮತಿ ಅಸಿಯ ಸಯೀದ್, ರವರು ದಿನಾಂಕ ೩ನೇ ಅಕ್ಟೋಬರ್ ೧೯೯೦ ರಿಂದ ೨೦ನೇ ಅಕ್ಟೋಬರ್ ೧೯೯೦ ರ ವರೆಗೆ ಮೈಸೂರು ನಗರದ ಅನೇಕ ಭಾಗಗಳಿಗೆ ಕರೆದು ಕೊಂಡು ಹೋಗಿದ್ದು ವಿದೇಶಿಯರೂ ತನ್ನ ಮೇಲೆ ಅತ್ಯಾಚಾರ ವೆಸಗಿರುತ್ತಾರೆಂದು ತಿಳಿಸಿದ್ದಾಳೆ. ಈ ದೂರಿನ ಮೇರೆಗೆ ನಜರಾಬಾದ್ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ ೧೮೮/೯೦ ಮೇರೆಗೆ ಕೇಸ್ ದಾಖಲು ಮಾಡಿಕೊಂಡು ಮುಂದಿನ ತನಿಖೆಯನ್ನು ಕೈಗೊಳ್ಳಲಾಯಿತು. ತನಿಖೆಯ ಪ್ರಕಾರ ಕುಮಾರಿ ಮಹೇಶ್ವರಿಗೆ ೧೫ ವರ್ಷ ವಯಸ್ಸು ಆಗಿದ್ದು ನಜರಾಬಾದ್ ಮೊಹಲ್ಲಾದ ಅರಸು ಬೋರ್ಡಿಂಗ್ ಸ್ಕೂಲ್‌ನಲ್ಲಿ ೧೦ನೇ ತರಗತಿಯಲ್ಲಿ ಓದುತ್ತಿರುವುದು ಕಂಡು ಬಂದಿದೆ. ಶ್ರೀಮತಿ ಅಸಿಯ ಸೆಯೀದ್ ಅವರು ವಿದ್ಯಾವರ್ಧಕ ಕಾಲೇಜಿನಲ್ಲಿ ಓದುತ್ತಿದ್ದು ಕು. ಮಹೇಶ್ವರಿಯ ಪಕ್ಕದ ನಿವಾಸಿಯಾಗಿರುತ್ತಾಳೆ. ಶ್ರೀಮತಿ ಅಸಿಯ ಸಯೀದಳು ಕು. ಮಹೇಶ್ವರಿ ಇವಳನ್ನು ಮೋಡಿ ಮಾಡಿ ವಿವಿಧ ಸ್ಥಳಗಳಿಗೆ ವಿವಿಧ ಸಮಯಗಳಲ್ಲಿ ವಿವಿಧ ಸಂದರ್ಭಗಳಲ್ಲಿ ತನ್ನೊಂದಿಗೆ ಸಂಪರ್ಕ ವಿರುವ ವಿದೇಶಿಯರೊಂದಿಗೆ ಕರೆದುಕೊಂಡು ಹೋಗಿರುವುದು ಕಂಡುಬಂದಿದೆ.

ಈ ಅತ್ಯಾಚಾರಕ್ಕೊಳಗಾಗಿರುವ ಕು. ಮಹೇಶ್ವರಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದು ೧೪ ವರ್ಷ ೯ ತಿಂಗಳು ಆಗಿರುವುದು ಕಂಡುಬಂದಿದೆ. ಈ ತನಿಖೆಯಿಂದಾಗಿ ಅತ್ಯಾಚಾರವೆಸಗಿರುವುದು ಸ್ಪಷ್ಟಪಟ್ಟಿದ್ದು ದಿನಾಂಕ ೧–೧೧–೧೯೯೦ ರಂದು ಈ ಅಪರಾಧಕ್ಕೆ ಒಳಪಟ್ಟ ಎಲ್ಲ ಅಪರಾಧಿಗಳನ್ನು ಬಂಧಿಸಿ ದಿನಾಂಕ ೨೮–೧೧–೧೯೯೦ರ ವರೆಗೆ ನ್ಯಾಯಾಲಯದ ಕಸ್ಟಡಿಗೆ ಒಳಪಡಿಸಲಾಗಿದೆ. ಇವರುಗಳ ವಿವರಗಳು ಈ ಕೆಳಕಂಡಂತೆ ಇದೆ.

೧. ಶ್ರೀಮತಿ ಅಸಿಯ ಸಯೀದ್ ಬಿನ್ ಸಯೀದ್, ೨೩ ವರ್ಷ, ೧ನೇ ಬಿ.ಕಾಂ., ವಿದ್ಯಾವರ್ಧಕ ಕಾಲೇಜು, ಮೈಸೂರು.

೨. ಇಬ್ರಾಹಿಂ ಬಿನ್ ಮೆಹರೂನ್ ೨೨ ವರ್ಷ ೩ನೇ ಬಿ.ಕಾಂ., ವಿದ್ಯಾವರ್ಧಕ ಕಾಲೇಜು, ಮೈಸೂರು.

೩. ಆದಂ ಬಿ. ಅಬ್ದುಲ್ ೨೫ ವರ್ಷ, ೧ನೇ ವರ್ಷದ ಕಂಪ್ಯೂಟರ್ ಸೈನ್ಸ್. ಎನ್. ಐ. ಐ. ಟಿ ಮೈಸೂರು.

೪. ಆಲಿ ಅಹ್ಮದ್ ಹಸನ್ ಸುಲ್ತಾನ್ ರಬ್ಬಾಸ್ ಬಿನ್ ಅಹ್ಮದ್, ೨೨ ವರ್ಷ, ೨ನೇ ಬಿ.ಕಾಂ., ವಿದ್ಯಾವರ್ಧಕ ಕಾಲೇಜು, ಮೈಸೂರು,

೫. ಸಮೀರ್ ಹುಸೇನ್ ಯೂಸಫ್ ಬಿನ್ ಮಹ್ಮದ್ ಯೂಸಫ್, ೨೧ ವರ್ಷ, ಬಿ.ಕಾಂ., ವಿದ್ಯಾರ್ಥಿ ವಿದ್ಯಾವರ್ಧಕ ಕಾಲೇಜು, ಮೈಸೂರು.

ಈ ಸಂಬಂಧದಲ್ಲಿ ವಿಚಾರಣಾಧಿಕಾರಿಯಾದ ಪೋಲೀಸ್ ಇನ್ಸ್‌ಪೆಕ್ಟರ್, ಲಷ್ಕರ್, ಇವರು ದಿನಾಂಕ ೧೯-೧೧-೧೯೯೦ ರಂದು ಈ ಮೇಲೆ ತಿಳಿಸಲಾದ, ಈ ಪ್ರಕರಣಕ್ಕೆ ಕಾರಣಗಳಾದ ಆಸಿಯ ಸಯೀದ್‌ಳನ್ನು ಒಳಗೊಂಡು ಮೇಲ್ಕಂಡ ಎಲ್ಲ ಅಪರಾಧಿಗಳ ಮೇಲೆ ದೋಷಾರೋಪಣ ಪತ್ರವನ್ನು ಸಲ್ಲಿಸಲಾಗಿದೆ.

ನಿಯಮ ೬೮ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ರಾಜ್ಯದಲ್ಲಿನ ಪಂತೀಯ ಗಲಭೆಗಳ ಬಗ್ಗೆ ಚರ್ಚೆ

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಡೆದಿರತಕ್ಕ ಕೋಮು ಗಲಭೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲ ವಿರೋಧ ಪಕ್ಷದ ಮುಖಂಡರುಗಳನ್ನು ಕರೆದು ಕೆಲವು ವಿವರಗಳನ್ನು ನೀಡಿದ್ದಾರೆ. ಇನ್ನೂ ಅನೇಕ ವಿಚಾರಗಳನ್ನು ಶಾಸನ ಸಭೆಯಲ್ಲಿ ನಾನು ತಿಳಿಸುತ್ತೇನೆ ಎಂಬ ಮಾತನ್ನು ಅವರು ಹೇಳಿದ್ದಾರೆ: ಅಶಾಂತ ವಾತಾವರಣ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಭೀಕರವಾಗಿ ತಲೆದೋರಿ ಗಂಭೀರವಾದ ಪರಿಸ್ಥಿತಿ ಉದ್ಭವವಾಯಿತು. ಕರ್ನಾಟಕ ರಾಜ್ಯದಲ್ಲಿ ೬೯ ಜನರ ಸಾವಿಗೂ ಕಾರಣವಾಯಿತು. ಈ ಎಲ್ಲ ಪರಿಸ್ಥಿತಿಗಳನ್ನು ಅವಲೋಕಿಸಿ ಸರ್ಕಾರ ಪರಿಣಾಮಕಾರಿಯಾದ ಕ್ರಮವನ್ನು ಕೈಗೊಳ್ಳಬೇಕಾದಂಥ ಪರಿಸ್ಥಿತಿ ಇವತ್ತು ಒದಗಿದೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಕೋಮು ಗಲಭೆಗಳ ಹಿನ್ನೆಲೆ ನೋಡಿದರೆ ಅದರಲ್ಲೂ ಕರ್ನಾಟಕ ರಾಜ್ಯ ಬಹಳ ಶಾಂತಿಗೆ ಅತ್ಯಂತ ಪ್ರಾಮಾಣೀವಾದ ರಾಜ್ಯ. ಈ ಒಂದು ಶಾಂತಿ ನೆಲೆಯನ್ನು ಕಾಪಾಡುವುದರಲ್ಲಿ ಕರ್ನಾಟಕ ರಾಜ್ಯ ಬಹಳ ಮೇಲ್ಪಟ್ಟದಲ್ಲಿರತಕ್ಕ ರಾಜ್ಯ. ನಾನು ತಮಗೆ ಕೆಲವು ಕವಿಗಳು ಹೇಳಿರತಕ್ಕ ವಿಚಾರಗಳನ್ನು ಹೇಳುತ್ತಿದ್ದೇನೆ. ಈ ರಾಜ್ಯ ಶರಣರು, ಸಂತರು ಬಾಳಿದಂಥ, ಹುಟ್ಟಿದಂಥ, ನಡೆದಂಥ ರಾಜ್ಯ. ಬಸವ, ಶಂಕರ, ರಾಮಾನುಜ, ವಿದ್ಯಾರಣ್ಯ, ರನ್ನ, ಪೊನ್ನ, ಜನ್ನ, ಪಂಪ, ಷಡಕ್ಷರಿ, ಲಕ್ಷ್ಮೀಷ, ಕುಮಾರವ್ಯಾಸ ಮುಂತಾದ ಮಹಾ ಕವಿಗಳು ಹುಟ್ಟಿದಂಥ ನಾಡು ಇದು. ಈ ನಾಡಿನಲ್ಲಿ ಶಾಂತಿ ನೆಲೆಸತಕ್ಕದ್ದು ಅತ್ಯಂತ ಅವಶ್ಯಕ. ದೇಶದಲ್ಲಿ ಎಲ್ಲೋ ಅಶಾಂತ ವಾತಾವರಣ ಇರಬಹುದು, ಆದರೆ ಕರ್ನಾಟಕ ರಾಜ್ಯದಲ್ಲಿ ಶಾಂತಿ ನೆಲೆಸಬೇಕಾದುದು ಕರ್ತವ್ಯ. ಇವತ್ತು ಮತ್ತೊಂದು ಕಡೆ ರಾಷ್ಟ್ರ ಕವಿ ಕುವೆಂಪು ಅವರು ತಮ್ಮ ಒಂದು ಕವಿತೆಯಲ್ಲಿ 'ಜೈ ಭಾರತ ಜನನಿಯ ತನುಜಾತೇ, ಜಯಹೇ ಕರ್ನಾಟಕ ಮಾತೆ. ಸುಂದರ ನದಿ ವನಗಳ ನಾಡೇ, ಜಯಹೇ ರಸ ದುಷಿಗಳ ಬೀಡೇ, ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಣ್‌ಗಳ ಸೆಳೆಯುವ ನೋಟ. ಹಿಂದೂ ಕ್ರೈಸ್ತ ಮುಸಲ್ಮಾನ, ಜೈನ ಪಾರಸಿಕರ ಉದ್ಯಾನ'' ಎಂದು ಹೇಳಿದ್ದಾರೆ. ಅಂದರೆ ಎಲ್ಲಾ ಸಮಾನ್ಯತೆಯ, ಸಮಾನತೆ ಈ ರಾಜ್ಯದಲ್ಲಿ ಇದೆ ಎಂಬುದನ್ನು ಅತ್ಯಂತ ಪವಿತ್ರವಾಗಿ ರಾಷ್ಟ್ರ ಕವಿ ಕುವೆಂಪು ಅವರು ತಮ್ಮ ಕವನದಲ್ಲಿ ಹೇಳಿದ್ದಾರೆ. ಆದರೆ ಎಲ್ಲರನ್ನೂ ದಂಗುಬಡಿಸತಕ್ಕ ಪರಿಸ್ಥಿತಿ ರಾಜ್ಯದಲ್ಲಿ ಉದ್ಭವವಾದದ್ದು ಅತ್ಯಂತ ಶೋಚನೀಯ. ಈ ಕೋಮು ಗಲಭೆ ಚನ್ನಪಟ್ಟಣ, ದಾವಣಗೆರೆ, ರಾಮನಗರದಿಂದ ಶುರುವಾಯಿತು. ನಾವು ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ಎಂಬ ಒತ್ತಾಯವನ್ನು ಆಗಿಂದಾಗ್ಗೆ ಸರ್ಕಾರಕ್ಕೆ ಮಾಡಿದ್ದಾಯಿತು. ನ್ಯಾಯಾಂಗ ತನಿಖೆ ಮಾಡುವುದಾದರೆ ಈ ಕೋಮು ದ್ವೇಷದ, ಗಲಭೆಯ ಹಿಂದೆ ರಾಜಕೀಯದ ಮಾತ್ಸರವೂ ಸುದ ದೊರಕುತ್ತದೆ, ಆದರ ಅಂಕಿ ಅಂಶವೂ ಬರುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಪರಿಣಾಮಕಾರಿಯಾದ, ಪ್ರಾಮಾಣಿಕವಾದ ಒಂದು ತೀರ್ಮಾನಕ್ಕೆ ಬರಲಿ, ಈ ನ್ಯಾಯಾಂಗ ತನಿಖೆಗೆ ಒಂದು ಕಾಲ ಮಿತಿ ಕೊಟ್ಟು ಇಷ್ಟು ದಿನಗಳೊಳಗಾಗಿ ಅದರ ವರದಿ ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಷರತ್ತನ್ನು ಹಾಕಿದರೆ ರಾಜಕೀಯದ ದ್ವೇಷ, ದಳ್ಳುರಿ, ಸರ್ಕಾರಗಳ ಪತನ, ಅದರ ಹಿಂದಿರತಕ್ಕ ವಿಷ ಜ್ವಾಲೆ ಎಲ್ಲವೂ ಹೊರಗಡೆ ಬರುತ್ತದೆ. ಇದನ್ನು ಬಹಳ ಪರಿಣಾಮಕಾರಿಯಾಗಿ ಸರ್ಕಾರ ಮಾಡಬೇಕಾದುದು ಕರ್ತವ್ಯ. ಆಗಲ್ಲಿ ನನ್ನ ಸ್ನೇಹಿತರು ಸದನದ ಸಮಿತಿ ಮಾಡಿ ಎಂದು ಹೇಳಿದ್ದಾರೆ. ಅದನ್ನು ಮಾಡಿದರೆ ತಪ್ಪಿಲ್ಲ. ನ್ಯಾಯಾಂಗ ತನಿಖೆ ಒಂದು ಕಡೆ ಇರಲಿ, ತಕ್ಷಣಕ್ಕೆ ಸದನದ ಸಮಿತಿ ಎಲ್ಲಾ ಪ್ರದೇಶಕ್ಕೂ ಹೋಗಿ ಅದರಲ್ಲೂ ಹೆಚ್ಚು ಗಲಭೆಗೆ ತುತ್ತಾಗಿರತಕ್ಕ ಚನ್ನಪಟ್ಟಣ, ದಾವಣಗೆರೆ, ರಾಮನಗರಕ್ಕೆ ಹೋಗಿ ಅಲ್ಲಿಯ ಜನರನ್ನು ಕೇಳಿ ಅವರಿಂದ ಬರುವ ಅಭಿಪ್ರಾಯವನ್ನು ಪಡೆಯುವುದಕ್ಕೆ ಅವಕಾಶವಾಗುತ್ತದೆ. ಅಧ್ಯಕ್ಷರೇ, ಈ ಸಂದರ್ಭದಲ್ಲಿ ೬೯ ಜನರ ಸಾವಿಗೆ ಕಾರಣ ಏನು? ಸತ್ತಿರತಕ್ಕ ದುರ್ದೈವಿಗಳು ಯಾವುದೇ ಕೋಮಿನವರಿರಬಹುದು. ಅವರು ಸತ್ತಿದ್ದಾರೆ. ಈ ಸಂದರ್ಭದಲ್ಲಿ ಬಂಧನಗಳು ಆಗಿವೆ, ರಾಜ್ಯದ